183

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 2018–19 ಹಾಗೂ 2019–20 ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಯಲ್ಲಿ ಕಂಡು ಬಂದಿರುವ ಲೋಪದೋಷಗಳಿಗೆ ಕಾರಣರಾದ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ ಆದೇಶ.

ಓದಲಾಗಿದೆ: ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಗ್ರಾಅಪ 173 (26) ಉಖಾಯೋ 2018, ದಿ:12.11.2019 ಮತ್ತು 03.12.2019

@@@@@@

**ಪ್ರಸ್ತಾವನೆ:–**

ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:12.11.2019 ರ ಪತ್ರದಲ್ಲಿ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರು ವರದಿ ಸಲ್ಲಿಸಿ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನರೇಗಾ ಕಾಮಗಾರಿಗಳ ಅನುಷ್ಠಾನದಲ್ಲಿ ಅವ್ಯವಹಾರವಾಗಿರುವ ಬಗ್ಗೆ ದೂರುಗಳು ಬಂದ ಕಾರಣ ತನಿಖೆ ನಡೆಸಲು ತನಿಖಾ ತಂಡವನ್ನು ನಿಯೋಜಿಸಲಾಗಿತ್ತೆಂದು, ತನಿಖಾ ತಂಡವು ಒಟ್ಟು 9 ಕಾಮಗಾರಿಗಳನ್ನು ತಪಾಸಣೆ ನಡೆಸಿದ್ದು, ಸದರಿ 9 ಕಾಮಗಾರಿಗಳ ಪೈಕಿ ಮೂರು ಕಾಮಗಾರಿಗಳನ್ನು ಅನುಷ್ಠಾನಗೊಳಿಸದೆ ಹಣ ಪಾವತಿಸಲಾಗಿದೆಯೆಂದು, ಉಳಿದ ಕಾಮಗಾರಿಗಳ ತಪಾಸಣೆಗೆ ಆಗಮಿಸುವುದನ್ನು ಪರಿಗಣಿಸಿ ತರಾತುರಿಯಲ್ಲಿ ಕಾಮಗಾರಿಯನ್ನು ಆರಂಭಿಸಿರುವುದು ಕಂಡು ಬಂದಿದ್ದು, ಕಾಮಗಾರಿಗಳ ಯಥಾಸ್ಥಿತಿಯನ್ನು ಕಾಪಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಲಾಗಿರುತ್ತದೆಯೆಂದು, ಸದರಿ ಅಕ್ರಮಗಳಿಗೆ (1) ಶ್ರೀ ಶಂಕರ ಮಳಗಿ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ (2) ಶ್ರೀ ಎಸ್.ಪಿ.ನಾಗೋಡ್, ಪ್ರಭಾರಿ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ (3) ಶ್ರೀ ಎಸ್.ಮುರಳೀಧರ್, ಹಿಂದಿನ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ ಹಾಗೂ (4) ಶ್ರೀ ರಂಗಯ್ಯ ಬಡಿಗೇರ್, ಹಾಲಿ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ ಇವರು ಕಾರಣರಾಗಿರುತ್ತಾರೆಂದು ತಿಳಿಸಿ, ಸದರಿಯವರ ಸೇವೆಯನ್ನು ಅಮಾನತ್ತುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಮತ್ತೊಬ್ಬ ಆರೋಪಿತ ಅಧಿಕಾರಿ ಶ್ರೀ ಎಸ್.ರವಿಪ್ರಸಾದ್, ಪ್ರಭಾರಿ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ ಇವರು ಸೇವೆಯಿಂದ ನಿವೃತ್ತಿ ಹೊಂದಿರುವ ಕಾರಣ ಸದರಿಯವರ ವಿರುದ್ಧ ಕ.ನಾ.ಸೇ. ನಿಯಮ 214 ರಡಿ ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುವರು. ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ತನಿಖಾ ವರದಿ, ದಾಖಲೆಗಳ ಪ್ರತಿಗಳು, ದೂರಿನ ಪ್ರತಿ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ.

ತಾಂತ್ರಿಕ ಸಮಾಲೋಚಕರು ಹಾಗೂ ಸಮಾಲೋಚಕರು ಪ್ರಶ್ನಿತ ಕಾಮಗಾರಿಗಳನ್ನು ತಪಾಸಣೆ ನಡೆಸಿದ ಸಂದರ್ಭದಲ್ಲಿ ಕಂಡು ಬಂದಿರುವ ವಾಸ್ತವಾಂಶಗಳು ಈ ಕೆಳಕಂಡಂತೆ ಇರುತ್ತವೆ:–

| ಕ್ರ ಸಂ. | ಕಾಮಗಾರಿಯ ಹೆಸರು ಮತ್ತು ಅಂದಾಜು ಮೊತ್ತ | ಪಾವತಿಸಿರುವ ಮೊತ್ತ | ತಪಾಸಣಾ ತಂಡದ ವರದಿ |
|---|---|---|---|
| 1. | ಕ್ರಿಷ್ಣಾಪುರ ಗ್ರಾಮದಲ್ಲಿ ರೈತರ ಕಣ ನಿರ್ಮಾಣ ರೂ. 4.00 ಲಕ್ಷ | 1,19,520/– | ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ. ಕೂಲಿ ಹಣವನ್ನು ಪಾವತಿಸಲಾಗಿದೆ. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ತಪಾಸಣಾ ಸಂದರ್ಭದಲ್ಲಿ ಲಭ್ಯಪಡಿಸಿರುವುದಿಲ್ಲ. |
| 2. | ಚಿಕ್ಕರಾಂಪುರ ಗ್ರಾಮದ ಬೆಟ್ಟದ ಯಲ್ಲಮ್ಮನ ದೇವಸ್ಥಾನಕ್ಕೆ ಮುಖ್ಯ ರಸ್ತೆಯಿಂದ ದೇವಸ್ಥಾನಕ್ಕೆ ಹೋಗುವ ರಸ್ತೆಗೆ 80 ಮೀ ಸಿ.ಸಿ. ರಸ್ತೆ ನಿರ್ಮಾಣ ರೂ.2.00 ಲಕ್ಷ | 47,808/– | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಪತ್ರಿಕೆ ಆಡಳಿತಾತ್ಮಕ ಮಂಜೂರಾತಿ ಯಾವುದೇ ಇರುವುದಿಲ್ಲ. ಕಾಮಗಾರಿ ತರಾತುರಿಯಲ್ಲಿ ಮುಗಿಸಿರುತ್ತಾರೆ. ಅಳತೆ ಪುಸ್ತಕದಲ್ಲಿ ಬೇಕಾದ ಹಾಗೇ ನಮೂದಿಸಿರುತ್ತಾರೆ. ಸ.ಕಾ.ಇಂ.ರವರು ಹಾಜರಾಗಿದ್ದಾರೆ, ಕಾಮಗಾರಿ ಪೂರ್ಣವಾಗಿದೆ. ಕೆಳಗಡೆ ಯಾವ ರೀತಿ ಜಲ್ಲಿ ಮತ್ತು ಮುರಂ ಹಾಕಿರುವ ಬಗ್ಗೆ ಮಾಹಿತಿ ಇರುವುದಿಲ್ಲ. Thickness ಸಹ ಕಂಡುಬಂದಿರುವುದಿಲ್ಲ. ಯಾವುದೇ ಕೊಟೇಷನ್ ಇರುವುದಿಲ್ಲ. ಕಡತದಲ್ಲಿ ಯಾವುದೇ ಅಧಿಕಾರಿಗಳ ಸಹಿ ಇರುವುದಿಲ್ಲ. |
| 3. | ಬಸವನದುರ್ಗ ಹಿಂದೂ ಸ್ಮಶಾನ ಅಭಿವೃದ್ಧಿ ಪಡಿಸುವುದು ರೂ.3.00 ಲಕ್ಷ | 1,15,536– | ಕಾಮಗಾರಿ ತೃಪ್ತಿಕರವಾಗಿದೆ, ದಾಖಲೆಗಳು ಕಂಡುಬಂದಿರುತ್ತವೆ, ಕಾಮಗಾರಿ ಪೂರ್ಣ ಗೊಂಡಿದೆ, ಬಿಲ್ಲ್ ಪೂರ್ಣವಾಗಿ ಪಾವತಿಯಾಗಿರುವುದಿಲ್ಲ. |
| 4. | ಸತ್ಯಪ್ಪನ ಮನೆಯಿಂದ ರಸ್ತೆವರೆಗೆ ಸಿ.ಸಿ.ರಸ್ತೆ ನಿರ್ಮಾಣ ರೂ.1.50 ಲಕ್ಷ | 35,856/– | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ. ತರಾತುರಿಯಲ್ಲಿ ಕಾಮಗಾರಿ ಮುಗಿಸಿರುತ್ತಾರೆ. ಯಾವುದೇ ಫೋಟೊಗಳು ಇರುವುದಿಲ್ಲ. ಕೆಳಭಾಗದಲ್ಲಿ ಜಲ್ಲಿ ಮತ್ತು ಮುರಂ ಹಾಕಿರುವ ಬಗ್ಗೆ ಯಾವುದೇ ದಾಖಲೆಗಳಲ್ಲಿ ತೋರಿಸಿರುವುದಿಲ್ಲ. ಅಳತೆ ಪುಸ್ತಕದಲ್ಲಿಯೂ ಸಹ ನಮೂದಿಸಿರುವುದಿಲ್ಲ. ಅಂದಾಜು ಪತ್ರಿಕೆ ಮತ್ತು ಆಡಳಿತಾತ್ಮಕ ಮಂಜೂರಾತಿ ಇರುವುದಿಲ್ಲ. |
| 5. | ಆನೆಗುಂದಿ ಗ್ರಾಮದ ಬೈಪಾಸ್ ರಸ್ತೆಯ ಹತ್ತಿರ ರೈತರ ಕಣ ರೂ. 4.00 ಲಕ್ಷ | 3,14,487/– | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ದಾಖಲೆಗಳು ಅಪೂರ್ಣವಾಗಿದ್ದು, ತರಾತುರಿಯಲ್ಲಿ ಕಾಮಗಾರಿಯನ್ನು ಪ್ರಾರಂಬಿಸಿರುತ್ತಾರೆ. ಎನ್.ಎಂ. ಆರ್. ಇಲ್ಲದೆ ಇರುವುದು ಕಂಡುಬರುತ್ತದೆ. ಹೆಚ್ಚಿನ ಕೂಲಿಯನ್ನು ಪಾವತಿಸಲಾಗಿದೆ. ಅಳತೆ ಪುಸ್ತಕವನ್ನು, ತರಾತುರಿಯಲ್ಲಿ ಬರೆದಿರುವುದು ಇದಕ್ಕೆ ಯಾರೊಬ್ಬರ ಸಹಿ ಇಲ್ಲದೆ ಇರುವುದು ಕಂಡುಬಂದಿರುತ್ತದೆ. ಹಣವನ್ನು ಅಧಿಕಾರಿಗಳು ಪಡೆದುಕೊಂಡಿದ್ದಾರೆ. |
| 6. | ಆನೆಗುಂದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂದುಗಡೆ ಮಳೆನೀರು ನುಗ್ಗದಂತೆ ತಡೆಗೋಡೆ ರೂ. 4.00 ಲಕ್ಷ | 83,664/– | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಕಂಡುಬಂದಿರುವುದಿಲ್ಲ. ತರಾತುರಿ -ಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕೂಲಿ ಮೊತ್ತವನ್ನು ಡ್ರಾ ಮಾಡಿರುತ್ತಾರೆ. ಚರಂಡಿ ತೆಗೆದು ಬೋಡರ್ಸ್ ತುಂಬಿರುತ್ತಾರೆ. ಕೆಳಗಡೆ ಕಾಂಕ್ರೀಟ್ ಹಾಕಿರುವ ಬಗ್ಗೆ ಕಂಡುಬಂದಿರುವುದಿಲ್ಲ. ಹಣ ಪಾವತಿ ಮತ್ತು ನಡೆದ ಕಾಮಗಾರಿಗೆ ಹೊಂದಾಣಿಕೆಯಾಗಿರುವುದಿಲ್ಲ. ಸಂಬಂಧಿಸಿದ ಸ.ಕಾ.ಇಂ. ಮತ್ತು ಕಾ.ಇಂ. ರವರು ಜೋಣೇದಾರರಾಗಿರುತ್ತಾರೆ. |

| | | | |
|---|---|---|---|
| 7. | ಬಸವನದುರ್ಗ ಕ್ಯಾಂಪ್ ಗ್ರಾಮದಿಂದ ಜವಾದಿ ವೆಂಕಟೇಶ ಇವರ ಹೊಲದವರೆಗೆ ನಮ್ಮ ಹೊಲ ನಮ್ಮ ದಾರಿ ನಿರ್ಮಾಣ ರೂ. 7.00 ಲಕ್ಷ | 2,03,184/- | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಕಡತದಿಂದ ಕಂಡುಬಂದಿರುವುದಿಲ್ಲ. ಕೂಲಿ ಮೊತ್ತವನ್ನು ಡ್ರಾ ಮಾಡಿರುತ್ತಾರೆ. ಕಾಮಗಾರಿಯ ಬಗ್ಗೆ ಯಾವುದೇ ಅಳತೆ ಪುಸ್ತಕ ಮತ್ತು ಎನ್.ಎಂ.ಆರ್. ಮಾಡಿರುವುದಿಲ್ಲ. ಕಾಮಗಾರಿ ನಡೆದ ಸ್ಥಳದಲ್ಲಿ ವಿಚಾರಣೆ ನಡೆಸಿದಾಗ ಸದರಿ ಕಾಮಗಾರಿಯನ್ನು ಹೆಚ್.ಕೆ.ಡಿ.ಬಿ. ವತಿಯಿಂದ ನಿರ್ಮಿಸಲಾಗಿದೆ ಎಂದು ತಿಳಿಸಿರುತ್ತಾರೆ. ಪೂರ್ಣಗೊಂಡ ಕಾಮಗಾರಿಗೆ ಬೋರ್ಡ್ ಹಾಕಲಾಗಿದೆ ಎಂದು ತಿಳಿಸಿರುತ್ತಾರೆ. |
| 8. | ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆಟದ ಮೈದಾನ ಅಭಿವೃದ್ಧಿ ಪಡಿಸುವುದು ರೂ. 1.00 ಲಕ್ಷ | 71,214/- | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇರುವುದಿಲ್ಲ. ಕಾಮಗಾರಿಯನ್ನು ಮಾಡಿರುವುದಿಲ್ಲವೆಂಬುದು ಶಾಲಾ ಮುಖ್ಯಸ್ಥರನ್ನು ವಿಚಾರಿಸಲಾಗಿ ತಿಳಿದುಬಂದಿರುತ್ತದೆ. |
| 9. | ನವಬೃಂದಾವನ ನದಿಯ ಹತ್ತಿರದಿಂದ ಸ್ಮಶಾನದವ -ರೆಗೆ ಸಿ.ಡಿ. ಮತ್ತು ರಸ್ತೆ ಅಭಿವೃದ್ಧಿ ಪಡಿಸುವುದು ರೂ. 3.50 ಲಕ್ಷ | 1,42,428/- | ಸದರಿ ಕಾಮಗಾರಿಯನ್ನು ತರಾತುರಿಯಲ್ಲಿ ಮಾಡಲಾಗಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ಕೂಲಿಯನ್ನು ಪಾವತಿಸಿರುತ್ತಾರೆ. ಆದರೆ ಕೂಲಿಗೆ ತಕ್ಕಂತೆ ಕಾಮಗಾರಿ ನಿರ್ವಹಿಸಿರುವುದಿಲ್ಲ ಮತ್ತು ಬೇಕಾಬಿಟ್ಟಿ ಮಾಡಲಾಗಿರುತ್ತದೆ. ಕೂಲಿ ಮತ್ತು ಪಾವತಿಸಿರುವ ಮೊತ್ತಕ್ಕೆ ಹೊಂದಾಣಿಕೆಯಾಗಿರುವುದಿಲ್ಲ. ಇದರಲ್ಲಿ 0.20 ಮೀ. ಮಣ್ಣಿನ ದಪ್ಪ ತೋರಿಸಿದ್ದು, ಅದರಂತೆ ಹಾಕಿರುವುದಿಲ್ಲ. ಸದರಿ ಕಾಮಗಾರಿಗೆ ಯಾವುದೇ ಸರಿಯಾದ ದಾಖಲೆಗಳು ಇರುವುದು ಕಂಡುಬಂದಿರುವುದಿಲ್ಲ. |

ಮೇಲ್ಕಂಡ ಕಾಮಗಾರಿಗಳ ಅನುಷ್ಠಾನಕ್ಕೆ ಈ ಕೆಳಕಂಡ ಅಧಿಕಾರಿ/ನೌಕರರುಗಳು ಕಾರಣರಾಗಿರುತ್ತಾರೆ:-

1) ಶ್ರೀ ಶಂಕರ ಮಳಗಿ, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ
2) ಶ್ರೀ ಎಸ್.ಡಿ.ನಾಗೋಡ, ಪ್ರಭಾರಿ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ
3) ಶ್ರೀ ರಂಗಯ್ಯ ಬಡಿಗೇರ್, ಹಾಲಿ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ.
4) ಶ್ರೀ ಎಸ್.ಮುರಳೀಧರ, ಹಿಂದಿನ ಕಾ.ಇಂ., ಪಂ.ರಾ.ಇಂ ವಿಭಾಗ, ಕೊಪ್ಪಳ.
5) ಶ್ರೀ ಎಸ್.ರವಿಪ್ರಸಾದ್, ಹಿಂದಿನ ಪ್ರಭಾರಿ ಕಾ.ಇಂ, ಪಂ.ರಾ.ಇಂ.ವಿಭಾಗ, ಕೊಪ್ಪಳ (ಹಾಲಿ ನಿವೃತ್ತ)

ಪ್ರಕರಣದ ಎಲ್ಲಾ ಸಂಗತಿಗಳು, ವಾಸ್ತವಾಂಶಗಳನ್ನು ಪರಿಶೀಲಿಸಲಾಗಿ, ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪಂ.ರಾ.ಇಂ. ವಿಭಾಗ ಮತ್ತು ಗಂಗಾವತಿ ಪಂ.ರಾ.ಇಂ. ಉಪವಿಭಾಗದ ವ್ಯಾಪ್ತಿಯಲ್ಲಿ ಆನೆಗುಂದಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಮೇಲಿನ ಕಾಮಗಾರಿಗಳಲ್ಲಿ ಮೇಲೆ ತಿಳಿಸಿರುವ ಅಧಿಕಾರಿ / ನೌಕರರುಗಳು ಮಂಜೂರಾದ ಅಂದಾಜಿನ ಅನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೆ ಇದ್ದರೂ ಸಹ ಹಣ ಸೆಳೆದಿರುವುದು, ಅನುಷ್ಠಾನಗೊಳಿಸಿದ ಪ್ರಮಾಣದ ಕಾಮಗಾರಿಗಿಂತ ಹೆಚ್ಚಿನ ಹಣ ಪಾವತಿಸಿರುವುದು, ಕಾಮಗಾರಿಯನ್ನು ಪ್ರಾರಂಭಿಸದೆ ಇದ್ದರೂ ಸಹ ಹಣ ಸೆಳೆದು ಪಾವತಿಸುವ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಕಂಡು ಬಂದಿರುತ್ತದೆ. ಮೇಲೆ ತಿಳಿಸಿರುವ ನೌಕರರುಗಳು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ನಿಷ್ಠೆ ಮತ್ತು ಪ್ರಾಮಾಣಿಕತೆ ಪ್ರದರ್ಶಿಸದೆ ತೀವ್ರತರವಾದ ದುರ್ನಡತೆ ಮತ್ತು ಕರ್ತವ್ಯ ಲೋಪ ಎಸಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳ ನಿಯಮ 3 (1) ನ್ನು ಉಲ್ಲಂಘಿಸಿರುತ್ತಾರೆ.

ಮೇಲೆ ತಿಳಿಸಿರುವ ಆಪಾದಿತರ ಪೈಕಿ ಶ್ರೀ ಎಸ್.ರವಿಪ್ರಸಾದ್, ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಕೊಪ್ಪಳ ಇವರು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಹಾಗಾಗಿ ಸದರಿಯವರಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಕ್ರಮವಹಿಸಲಾಗುವುದು.

ಉಳಿದ ಅಧಿಕಾರಿಗಳನ್ನು ಸೇವೆಯಲ್ಲಿ ಮುಂದುವರೆಸಿದಲ್ಲಿ ತಮ್ಮ ಅಧಿಕಾರದ ಪ್ರಭಾವವನ್ನು ಬಳಸಿ, ಸಾಕ್ಷಿ/ ದಾಖಲೆಗಳನ್ನು ತಿದ್ದುವ / ತಿರುಚುವ ಮತ್ತು ನಾಶಪಡಿಸುವ ಸಾಧ್ಯತೆಗಳಿರುವುದರಿಂದ ಅವರ ವಿರುದ್ಧ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಲು ಕ್ರಮಕೈಗೊಳ್ಳುವುದನ್ನು ಬಾಕಿ ಇರಿಸಿ, ತಕ್ಷಣದಿಂದ ಅನ್ವಯವಾಗುವಂತೆ ಸೇವೆಯಿಂದ ಅಮಾನತ್ತುಪಡಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

<u>ಆದೇಶ ಸಂಖ್ಯೆ: ಗ್ರಾಅಪ 95 ಇಎನ್‌ಕ್ಯೂ 2019 ಬೆಂಗಳೂರು, ದಿನಾಂಕ:01.01.2020</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಕಂಡು ಬಂದಿರುವ ತೀವ್ರ ಸ್ವರೂಪದ ಕರ್ತವ್ಯ ಲೋಪ / ದುರ್ನಡತೆಗಳ ಆರೋಪಗಳಿಗೆ ಸಂಬಂಧಿಸಿದಂತೆ ಅವರುಗಳ ವಿರುದ್ಧ ಕೈಗೊಳ್ಳಬಹುದಾದ ಇಲಾಖಾ ವಿಚಾರಣೆ / ಇತ್ಯಾದಿ ಕ್ರಮ ಬಾಕಿ ಇರಿಸಿ ತಕ್ಷಣದಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 10 (1) (ಡಿ) ರನ್ವಯ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ:-

1) ಶ್ರೀ ಶಂಕರ ಮಳಗಿ, ಹಾಲಿ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಕುಷ್ಟಗಿ
2) ಶ್ರೀ ಎಸ್.ಡಿ.ನಾಗೋಡ, ಪ್ರಭಾರಿ ಸ.ಕಾ.ಇಂ. ಪಂ.ರಾ.ಇಂ ಉಪವಿಭಾಗ, ಗಂಗಾವತಿ
3) ಶ್ರೀ ರಂಗಯ್ಯ ಬಡಿಗೇರ್, ಹಾಲಿ ಕಾ.ಇಂ, ಪಂ.ರಾ.ಇಂ ವಿಭಾಗ, ಕೊಪ್ಪಳ.
4) ಶ್ರೀ ಎಸ್.ಮುರಳೀಧರ, ಹಿಂದಿನ ಕಾ.ಇಂ., ಪಂ.ರಾ.ಇಂ ವಿಭಾಗ, ಕೊಪ್ಪಳ.

ಸದರಿ ಅಧಿಕಾರಿಗಳು ನಿಯಮಾನುಸಾರ ಜೀವನಾಧರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಸದರಿಯವರ ಹುದ್ದೆಯ ಹಕ್ಕು (ಲೀನ್)ನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರಿಗೆ ವರ್ಗಾಯಿಸಿದೆ. ಸದರಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನ ಬಿಡತಕ್ಕದ್ದಲ್ಲ.

ಕೂಡಲೇ ಸದರಿಯವರುಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 01/01/2020
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

179

2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ.ಪಂ.ರಾಜ್ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
7. ಅಧೀಕ್ಷಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬಳ್ಳಾರಿ
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
9. ಸಂಬಂಧಿಸಿದ ಅಧಿಕಾರಿಗಳಿಗೆ, (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಮುಖಾಂತರ).
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರು
12. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.